ಸಿ.ಸಿ..ನಂ.12-25

ಪಿ.ಡಬ್ಲ್ಯೂ-1

ದಿನಾಂಕ: 29-05-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿ ಕರಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿ.ವಿ ಎಸ್ ವಕೀಲರಿಂದಃ**

1. ನಿಪಿ-1 ನಾನು ಕೊಟ್ಟಿರುವ ದೂರು ಆಗಿರುತ್ತದೆ . ಮೊದಲು ಪಿರ್ಯಾದೆ ಕೊಟ್ಟಾದ ನಂತರ ಪ್ರ ವ ವ ರಜಿಸ್ಟರ ಆಗುತ್ತದೆ . ಪಿರ್ಯಾದೆ ಯನ್ನು ಸೆಕ್ಷನ 55 wild life Act ಪ್ರಕಾರ ನ್ಯಾಯಾಲಯಕ್ಕೆ ಕೊಡಬೇಕು ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಕೊಟ್ಟ ಪಿರ್ಯಾದೆಯನ್ನು ತೋರಿಸುತ್ತೀರಾ ಎಂದರೆ ಸಾಕ್ಷಿ ಯು ಕಂಪ್ಲೆಂಟ ನಲ್ಲಿ ಪ್ರತ್ಯೇಕವಾಗಿ ನ್ಯಾಯಾಲಯದ ಹೆಸರು ಇರುವುದಿಲ್ಲ ಆದರೆ ಸದ್ರಿ ಕಂಪ್ಲೆಟ ವನ್ನು ನ್ಯಾಯಾಲಯಕ್ಕೆ ಲೇಟರ ಮೂಲಕ ಕಳುಹಿಸಿ ಕೊಡುತ್ತೇವೆ . ಸದ್ರಿ ದೂರನ್ನು ನ್ಯಾಯಾಲಯಕ್ಕೆ ದಿಃ 7-1-2022 ರಂದು ಕೊಟ್ಟಿರುತ್ತೇವೆ . ದೂರು ಕೊಡುವ ಮೊದಲು FIR ನಂಬರ ನಮಗೆ ಗೊತ್ತಿರುವುದಿಲ್ಲ . ಪ್ರ ವ ವ ರಜಿಸ್ಟರ ಆದ ನಂತರ ನಂಬರ ಬಿಳುತ್ತದೆ . ಆದರೆ ರೆಂಜ ಪಾರೆಸ್ಟ ಆಫೀಸ್ ದಲ್ಲಿ ರಜಿಸ್ಟರ ಇದ್ದು ಅದರಲ್ಲಿ Sl. No. ಪ್ರಕಾರ ನಂಬರ ಬಿಳುತ್ತಾ ಹೋಗುತ್ತದೆ . ಕಂಪ್ಲೆಟ ನಲ್ಲಿ ಬರೆದಿರುವ 9/2021-22 ಇದು ರೆಂಜ ಆಫಿಸ ನ ರಜಿಸ್ಟರನ Sl. No. ಆಗಿರುತ್ತದೆ . ಈ ಪ್ರಕರಣದಲ್ಲಿ wild life Act ದಲ್ಲಿ ಪಿರ್ಯಾದೆ ಕೊಟ್ಟಿರುವುದರಿಂದ ಪ್ರ ವ ವ ಆಗಿಲ್ಲ. ಸದ್ರಿ ದೂರನ್ನು ಎಲ್ಲಿ ಟೈಪ್ ಮಾಡಿಸಿರುತ್ತೀರಿ ಎಂದರೆ ರೆಂಜ ಪಾರೆಸ್ಟ ಆಫಿಸ ಮಾಸ್ತಿಕಟ್ಟಾ ದಲ್ಲಿ ಟೈಪ ಮಾಡಿಸಲಾಗಿರುತ್ತದೆ . ದಿಃ7-1-2022 ರಂದು ಸಂಜೆ 5-00 ಸಮಯಕ್ಕೆ ರಜಿಸ್ಟರ ಮಾಡಿರುತ್ತೇವೆ .ಕಂಪ್ಲೆಂಟ ಜೊತೆ ಇರುವ ಮೆಡಿಕಲ್ ರಿಪೊರ್ಟ ಏನು ಎಂದರೆ ಅದು ಆರೋಪಿತರಿಗೆ ಮೆಡಿಕಲ್ ಚೆಕ ಅಪ ಮಾಡಿಸಿದ ರಿಪೊರ್ಟ ಆಗಿರುತ್ತದೆ . ಸದಿರ ಮೆಡಿಕಲ್ ಚೆಕ ಅಪ ವನ್ನು ಅಂಕೋಲಾದ ಸರಕಾರಿ ಆಸ್ಪತ್ರೆಯಲ್ಲಿ ಮಾಡಿಸಲಾಗಿದೆ .

2. ಕಂಪ್ಲೆಂಟ ರೆಡಿ ಮಾಡಿ ಕೊಂಡು ಆರೋಪಿತರ ಮೆಡಿಕಲ್ ಚೆಕಅಪ್ ಮಾಡಿಸಿರುತ್ತೀರಾ ಅಥವಾ ಮೆಡಿಕಲ್ ಚೆಕಅಪ್ ಆದ ನಂತರ ಕಂಪ್ಲೆಂಟ ಮಾಡಿಸಿರುತ್ತೀರಾ ಎಂದರೆ ಮೊದಲು ಅರೋಪಿತರ ಮೆಡಿಕಲ ಚೆಕಅಪ್ ಮಾಡಿಸಿ ಆರೊಪಿತರನ್ನು ನ್ಯಾಯಾಧಿಶರ ಮನೆಗೆಹಾಜರ ಪಡಿಸಲಾಗಿತ್ತು . ಕಂಪ್ಲೆಂಟ ನಂತರ ಟೈಪ ಮಾಡಿಸಿ

ತರಲಾಗಿರುತ್ತದೆ . ಕಂಪ್ಲೆಂಟ ವನ್ನು ಮಾಸ್ತಿಕಟಾ ಹೋಗಿ ಟೈಪ ಮಾಡಿಸಿ ತಂದು ತಂದಿರುತ್ತೀರಾ ಎಂದರೆ ನನಗೆ ನೆನಪಿಲ್ಲ.

**3**. ಕಂಪ್ಲೆಟ ವನ್ನುಟೈಪ ಮಾಡಿಸಲು ಹೋದಾಗ ಆರೋಪಿತರನ್ನು ಯಾರ ಸುಪರ್ದಿಗೆ ಕೊಟ್ಟಿರುತ್ತೀರಿ ಎಂದರೆ ಚಾಸಾ 2 ರವರ ಸುಪರ್ದಿಗೆ ಕೊಡಲಾಗಿತ್ತು .ಆರೊಪಿತರ ಮೆಡಿಕಲ್ ಚೆಕ ಅಪ ವನ್ನು ಸಂಜೆ-5-00 ಗಂಟೆ ಮೇಲೆ ಮಾಡಿಸಿರುತ್ತೇವೆ . ಕಂಪ್ಲೆಂಟ ಸಂಜೆ 5-00 ಮೇಲೆ ಟೈಪ ಮಾಡಿಸಲಾಗಿರುತ್ತದೆ . ಚಾಸಾ -3 ರಿಂದ 5 ರವರು ನಮ್ಮ ಇಲಾಖೆಯ ಖಾಯಂ ನೌಕರರು ಅಲ್ಲ ಅವರು ದಿನಗೂಲಿ ನೌಕರರು ಆಗಿರುತ್ತಾರೆ ಕರೆದಾಗ ಬರುತ್ತಾರೆ . ಚಾಸಾ -3 ರಿಂದ 5 ರವರು ಅನೇಕ ವರ್ಷ ಗಳಿಂದ ದಿನಗೂಲಿ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದಾರೆ ಎಂದೆರ ಸರಿ . ಸಾಕ್ಷಿ ಪುನಃ ಮುಂದುವರೆದು ಅವರು ಇಲಾಖೆಯಿಂದ ಕರೆದಾಗ ಬರುತ್ತಾರೆ ಅಂದರೆ ಮಧ್ಯದಲ್ಲಿ ಆಗಾಗ ಅವರನ್ನು ಕೈ ಬಿಟ್ಟು ನಂತರ ಕೆಲಸಕ್ಕೆ ತೆಗೆದು ಕೊಳ್ಳುತ್ತೇವೆ . ಸಾಮಾನ್ಯವಾಗಿ ಚಾಸಾ -3 ರಿಂದ 5 ರವರು ನೀವು ಹೇಳಿದ ಮಾತನ್ನು ಕೇಳುತ್ತಾರೆ ಎಂದರೆ ನಮ್ಮ ಇಲಾಖೆಯಲ್ಲಿ ಕೆಲಸ ಮಾಡುವುದರಿಂದ ಇಲಾಖೆಗೆ ಸಂಬಂದಿಸಿದಂತೆ ಮಾತನ್ನು ಕೇಳುತ್ತಾರೆ .

**4**. ನಿಪಿ-3 ರಿಂದ 5 , ಮತ್ತು 9 ರಿಂದ 12 ಇವುಗಳು ಪೇಪರ ಮೇಲೆ ತೆಗೆದ ಪ್ರಿಂಟ ಎಂದರೆ ನಾವು ಪೊಟೊ ತೆಗೆದಿದ್ದೆವು ಅದನ್ನೆ ಕಲರ ಪ್ರಿಂಟ ಹಾಕಿಸಿದ್ದೇವೆ . ಸದ್ರಿ ಪೊಟೊ ಗಳು ಪೇಪರ ಮೇಲೆ ತೆಗೆದ ಪ್ರಿಂಟ ಆಗಿರುವುರಿಂದ ನೀವು ಹೇಳುವಂತಹ ಮಾಂಸಗಳು ಸ್ಪಷ್ಟವಾಗಿ ಕಾಣುತ್ತಿಲ್ಲ ಎಂದರೆ ಸರಿಯಲ್ಲ . ನೀವು ನೋಡಿದೆನು ಎಂದು ಹೇಳಲಾದ ಮಾಂಸ ಬೇಯಿಸಿದ ಸ್ಥಿತಿಯಲ್ಲಿ ಇತ್ತಾ ಅಥವಾ ನೀರಿನಲ್ಲಿ ತೊಳೆದ ಸ್ಥಿತಿಯಲ್ಲಿ ಇತ್ತಾ ಎಂದರೆ 2 ನೇ ಅರೋಪಿಯ ಮನೆಯಲ್ಲಿ ಮಾಂಸವು ನೀರಿನಲ್ಲಿ ತೊಳೆದ ಸ್ಥಿತಿಯಲ್ಲಿ ಇತ್ತು .1 ನೇ ಆರೋಪಿಯ ಮನೆಯಲ್ಲಿ ಸಿಕ್ಕ ಮಾಂಸವು ಕೂಡ ನೀರಿನಲ್ಲಿ ತೊಳೆದ ಸ್ಥಿತಿಯಲ್ಲಿ ಇತ್ತು . ನಿಪಿ-5 ರ ಪೊಟೊದಲ್ಲಿ ಮಾಂಸ ಕಾಣುತ್ತಿಲ್ಲ ಎಂದರೆ ಪಾತ್ರೆಗಳು ಇವೆ . ಪಾತ್ರೆಯ ಒಳಗಡೆ ಇರುವ ಮಾಂಸ ಕಾಣುತ್ತಿಲ್ಲ . ನೀವು ಮನಸ್ಸು ಮಾಡಿದರೆ ಮಾಂಸ ಸ್ಪಷ್ಟ ವಾಗಿ ಕಾಣುವಂತಹ ಪೊಟೊವನ್ನು ತೆಗಯ ಬಹುದಾಗಿತ್ತು ಎಂದರೆ ಸರಿ .

**5**. ನಿಪಿ-9 ರಂತೆ ಉರುಳನ್ನು ಹಾಕಲು ಬಲವಾದ ಒಂದು ಮರದಂದತಹ ವಸ್ತು ಬೇಕಾಗುತ್ತದೆ ಆದರೆ ಆ ವಸ್ತು ನಿಪಿ-9 ರಲ್ಲಿ ಕಾಣುವುದಿಲ್ಲ ಎಂದರೆ ಸರಿ . ಆದರೆ ಅಲ್ಲಿ ಇತ್ತು . ನೀವು ಮನಸ್ಸು ಮಾಡಿದರೆ ಆ ಉರುಳನ್ನು ಕಟ್ಟಲು ಉಪಯೋಗಿಸಿದ ಗಟ್ಟಿಯ ಭಾಗದ ಪೊಟೊವನ್ನು ತೆಗೆಯಬಹುದಾಗಿತ್ತು ಎಂದರೆ ನಾವು ಅಲ್ಲಿಗೆ ಹೋದಾಗ ಅಲ್ಲಿ ಉರುಳು ಇರಲಿಲ್ಲ . ಉರುಳು ಕಟ್ಟಿದ್ದ ಯಾವ ಗಿಡ ಅಥವಾ ಮರದ ಭಾಗ ಎಂದು ಆರೋಪಿತರಿಗೆ ಕೇಳಿರುತ್ತೀರಾ ಎಂದರೆ ಇಲ್ಲ . ಆದೇ ರೀತಿ ಪಂಚನಾಮೆ ಯಲ್ಲೂ ಸಹ ಉರುಳು ಇಂತಹ ಭಾಗಕ್ಕೆ ಕಟ್ಟಲಾಗಿತ್ತು ಎಂದು ಬರೆದಿರುವುದಿಲ್ಲ ಎಂದರೆ ಸರಿ . ಹಂದಿಯನ್ನು ಕೊಚ್ಚಿದ್ದಲ್ಲಿ ಹಂದಿಯ ರಕ್ತ ಮತ್ತು ಅವಶೇಷಗಳು ಬೀಳುವ ಸಾಧ್ಯತೆ ಇರುತ್ತದೆ ಎಂದರೆ ಸರಿ . ಆ ಹಂದಿಯನ್ನು ಕೊಚ್ಚಿ ಪಾಲು ಮಾಡಿದ ಜಾಗ ಯಾವುದು ಎಂದು ಅರೋಪಿತರಿಗೆ ಕೇಳಿರುತ್ತೀರಾ ಎಂದರೆ ಹೌದು . ಇಂತಹ ಜಾಗದಲ್ಲಿ ಹಂದಿಯನ್ನು ಕೊಚ್ಚಲಾಗಿತ್ತು . ರಕ್ತದ ಕಲೆಗಳು ಹಾಗೂ ಅದರ ಅವಶೇಷಗಳು ಬಿದ್ದಿತ್ತು ಎಂದು ಪಂಚನಾಮೆಯಲ್ಲಿ ಬರೆದಿರುತ್ತೀರಾ ಎಂದರೆ ರಕ್ತದ ಕಲೆಗಳು ಹಾಗೂ ಅದರ ಅವಶೇಷಗಳು ಬಿದ್ದಿರುವ ಬಗ್ಗೆ ಬರೆದಿಲ್ಲ ಆದರೆ ಆ ಜಾಗವನ್ನು ಪಂಚನಾಮೆ ಯಲ್ಲಿ ತೋರಿಸಲಾಗಿರುತ್ತದೆ .

**6**. ನಿಪಿ-12 ರಲ್ಲಿ ಕಾಣುವ ಸಿಬ್ಬಂದಿ ಚಾಸಾ-2 ಹಾಗೂ ನಾನು ಆಗಿರುತ್ತೇನೆ . ಚಾಸಾ-6 ರವರು ಯಾವಾಗ ಬಂದರು ಎಂದರೆ ಚಾಸಾ 6 ರವರು 2 ನೇ ಪುರವಣಿ ಪಂಚನಾಮೆಗೆ ಬಂದಿರುತ್ತಾರೆ . ನಮಗೆ ಮಾಹಿತಿ ಬಂದ ಪ್ರಕಾರ ಮಾಂಸ ಮತ್ತು ಅರೋಪಿತರು ನಮಗೆ ಸಿಕ್ಕಿತು ನಂತರ ಅವುಗಳನ್ನೆಲ್ಲಾ ಮತ್ತು ಆರೋಪಿತರನ್ನು ಕರೆದು ಕೊಂಡು ನಾವು ರೆಂಜ್ ಆಫೀಸ್ ಮಾಸ್ತಿಕಟ್ಟಾ ಹೋಗಿರುತ್ತೇವೆ . ಸದ್ರಿ ರೆಂಜ್ ಆಫೀಸ ಗೆ ಬೆಳಿಗ್ಗೆ 10-00 ಸಮಯಕ್ಕೆ ಹೋಗಿರುತ್ತೇವೆ . ನಂತರ ಅರೋಪಿತರ ಮನೆಗೆ ಸಂಜೆ 4-00 ಗಂಟೆಗೆ ಬಂದಿರುತ್ತೇವೆ . ಸದ್ರಿ ತನಿಖೆಯ ಕಾಲದಲ್ಲಿ ಸದ್ರಿ ಹಂದಿಯನ್ನು ಕೊಚ್ಚಿದ ಸ್ಥಳ ಹಾಗೂ ಹುತಿಟ್ಟ ಸ್ಥಳ ಮತ್ತು ಉರುಳು ಹಾಕಿದ ಸ್ಥಳ ಎಲ್ಲವನ್ನು ಅರೋಪಿತರು ತೋರಿಸಿರುತ್ತಾರೆ . ಮೊದಲು ನಾವು ಮಾಂಸ ದ ಪಂಚನಾಮೆಯನ್ನು ಮಾಡಿರುತ್ತೇವೆ . 2 ನೇಯದ್ದು ಪುರವಣಿ ಪಂಚನಾಮೆ ಆಗಿರುತ್ತದೆ .

**7**. ಮೊದಲು ಮಾಂಸದ ಪಂಚನಾಮೆ ಮಾಡುವ ಕಾಲಕ್ಕೆ ಮಾಂಸವು ಪಾತ್ರೆಯಲ್ಲಿ ಇತ್ತು . ಆ ಪಾತ್ರೆಯನ್ನು ಜಪ್ತು ಪಡಿಸಿಕೊಳ್ಳಲು ಯಾವುದೇ ತೊಂದರೆ ಇರಲಿಲ್ಲ . ಮಾಂಸವನ್ನು ಜಪ್ತು ಪಡಿಸಿ ಕೊಳ್ಳುವಾಗ ನೀವು

ಏನನ್ನು ಮಾಡಿರುತ್ತೀರಿ ಎಂದರೆ ಸದ್ರಿ ಮಾಂಸವನ್ನು ಒಂದು ಪಾತ್ರೆಗೆ ಹಾಕಿರುತ್ತೇವೆ . ಸದ್ರಿ ಪಾತ್ರೆಯು ಅರೋಪಿತರ ಮನೆಯದ್ದು ಆಗಿರುತ್ತದೆ . 3 ಆರೋಪಿತರ ಮನೆಯಲ್ಲಿ ಮಾಂಸಗಳು ಸಿಕ್ಕಿರುತ್ತದೆ ಎಂದು ಹೇಳಿರುತ್ತಿರಿ ಆ ಮಾಂಸಗಳನ್ನು ಪ್ರತ್ಯೇಕವಾಗಿ 3 ಪಾತ್ರೆಯಲ್ಲಿ ಹಾಕಿರುತಿರಾ ಎಂರೆ ಹೌದು 3 ಪಾತ್ರೆಗಳನ್ನು ತೆಗೆದು ಕೊಂಡು ಹೋಗಿ ಮಾಂಸವನ್ನು 3 ಪಾತ್ರೆಗಳಲ್ಲಿ ಪಡೆದುಕೊಂಡು ನಂತರ ರೆಂಜ ಪಾರೆಸ್ಟ ಆಪಿಸ್ ಗೆ ಹೋಗಿರುತ್ತೇವೆ . ಬೆಳಿಗ್ಗೆ 8 ನೆ ತಾರೀಖಿನ 10–00 ಗಂಟೆಗೆ ವರೆಗೆ ಸದ್ರಿ ಮಾಂಸವು ಆ 3 ಪಾತ್ರೆಗಳು ರೆಂಜ ಪಾರೆಸ್ಟ ಆಫಿಸದಲ್ಲಿ ಇತ್ತು . ರೆಂಜ ಪಾರೆಸ್ಟ ಆಫಿಸರದಲ್ಲಿ ಪ್ರಿಜರ್ ಇರುವುದಿಲ್ಲ . ಸದ್ರಿ ಮಾಂಸಗಳನು ಜಪ್ತು ಮಾಡುವ ಸಮಯದಲ್ಲಿ ಕೆಮಿಕಲ್ ಹಾಕುವುದಾಗಲಿ ಅಥವಾ ಉಪ್ಪು ಹಾಕುವುದಾಗಲಿ ನೀವು ಮಾಡಿರುತ್ತೀರಾ ಎಂದರೆ ಇಲ್ಲ ಆದರೆ ವೈದರು ಮಾಡಿರುತ್ತಾರೆ . ಸದ್ರಿ ಮಾಂಸಗಳನ್ನು ಜಪ್ತು ಮಾಡಿ ಕೊಂಡೆವು ಎನ್ನಲಾದ ಸಮಯದಲ್ಲಿ ತೂಕ ಮಾಡಿಲ್ಲ .

8. ಜಪ್ತು ಮಾಡಿ ಕೊಂಡೆವು ಎನ್ನಲಾದ ಸಮಯದಲ್ಲಿ ಅದು ಯಾವ ಭಾಗದ ಮಾಂಸ ಎಂದು ವಿವರಣೆ ಪಡೆದು ಕೊಂಡಿರುತ್ತಿರಾ ಎಂದರೆ ಮಾಂಸ ಮಾಡಿರುವುದರಿಂದ ಅದು ಆ ಪ್ರಾಣಿಯ ಯಾವ ಭಾಗದ್ದು ಎಂದು ಹೆಳಲು ಆಗುವುಲದಿಲ್ಲ . ನೀವು ಪಂಚನಾಮೆ ಮಾಡುವ ಸಮಯದಲ್ಲಿ ಅದು ತಾಜಾ ಇತ್ತಾ ಅಥವಾ ಹಾಳಾಗಿತ್ತಾ ಎಂದು ನಮೂದು ಮಾಡಿಲ್ಲ ಎಂದರೆಸ ರಿ . ನಿಪಿ–3 ರಿಂದ 5 ಹಾಗೂ 9–12 ನ್ನು ನೀವು ಸೃಷ್ಟಿ ಮಾಡಿಕೊಂಡಿರುತ್ತೀರಿ ಎಂದರೆ ಸರಿಯಲ್ಲ . ಸದ್ರಿ 1 ನೆ ಅರೊಪಿಯು ಕಾಡು ಹಂದಿಗಾಗಿ ಉರುಳು ಹಾಕಿದ್ದಾಗಲಿ ಅಥವಾ ಅದರ ಅವಶೇಷಗಳನ್ನು ಹೂತಿಟ್ಟಿದ್ದು ಆಗಲಿ ಇಲ್ಲ ಎಂದರೆ ಸರಿಯಲ್ಲ .

9. ನಾನು Msc chemistry ಸ್ನಾತಕ್ಕೊತ್ತರ ಪದವಿ ಪಡೆದಿರುತ್ತೇನೆ . ಮಾಂಸವನ್ನು ಯಾವ ರೀತಿ ಪ್ರೀಜರಿ ಮಾಡಬೇಕು ಎಂದು ನೀಮಗೆ ಗೊತ್ತು ಎಂದರೆ ಸರಿ . ನಾರ್ಮಲ ಸಲೈನ ದಲ್ಲಿ ಉಪ್ಪು ಇರುತ್ತದೆ ನಾರ್ಮಲ ಸಲೈನ ದಲ್ಲಿ ಎಷ್ಟು ಪ್ರತಿಶತ ಉಪ್ಪು ಇರುತ್ತದೆ ಎಂದು ನನಗೆ ಗೊತ್ತಿಲ್ಲ . ಎಷ್ಟು ಪ್ರತಿಶತ ಉಪ್ಪು ಇದ್ದರೆ ಮಾಂಸ ಹಾಳಾಗುವುದಿಲ್ಲ ಬ್ಯಾಕ್ಟಿರಿಯಾ ಬೆಳವಣೆಗೆ ಆಗುವುದಿಲ್ಲ ಎಂಬ ನಿಮಗೆ ಗೊತ್ತಾ ಎಂದರೆ ನನಗೆ ಮಾಹಿತಿ ಇಲ್ಲ .ಸದ್ರಿ ಮಾಂಸ ವನ್ನು ಪಶು ವೈದ್ಯಾಧಿಕಾರಿಗಳು ಬಂದು ಪ್ರೆತ್ಯೆಕವಾಗಿ 2 ಮಾದರಿ ಪಡೆದುಕೊಂಡು ಪ್ರಿಜರ್ವ ಮಾಡಿರುತ್ತಾರೆ . ಸದ್ರಿ ಪಶು ವೈದ್ಯಾಧಿಕಾರಿಗಳು ಅಗಸೂರಿನವರಾಗಿರುತ್ತಾರೆ ಆಗ ಅಗಸೂರಿನಲ್ಲಿ ಪಶು

ವೈದ್ಯಾಧಿಕಾರಿಗಳು ಇದ್ದರು ಈಗ ಇಲ್ಲ . ನಾರ್ಮಲ ಸಲೈನ ದಲ್ಲಿ NACL ಇರುತ್ತದೆ ಎಂದರೆ ಸರಿ . ನಾರ್ಮಲ ಸಲೈನ ದಲ್ಲಿ NACL 0.9 ಪ್ರತಿಶತ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ . ಮಾಂಸದಲ್ಲಿ NACL ಉಪಯೋಗಿಸಿದರೆ ಬ್ಯಾಕ್ಟಿರಿಯಾ ಬೆಳವಣಿಗೆಯಾಗಿ ಅದು ತನ್ನ original DNA ಕಳೆದು ಕೊಳ್ಳುತ್ತದೆ ಎಂದರೆ ನನಗೆ ಗೊತ್ತಿಲ್ಲ . ಕಾರಣ ನ್ಯಾಯಾಲಯಕ್ಕೆ ಬಂದ FSL ವರದಿಯು ಸೂಕ್ತವಾದ ವರದಿ ಅಲ್ಲ ಎಂದರೆ ಗೊತ್ತಿಲ್ಲ .

**10.** ಪಿರ್ಯಾದೆ ಯನ್ನು ಸಲ್ಲಿಸಲು ರಾಜ್ಯ ಸರಕಾರದ ಅಧಿಸೂಚನೆ ಇದೆ ಎಂದು ಅದನ್ನು ನ್ಯಾಯಾಲಯಕ್ಕೆ ಹಾಜರ ಪಡಿಸಿರುತ್ತೀರಾ ಎಂದರೆ ಅಧಿಸೂಚನೆ ಹಾಜರ ಪಡಿಸಿಲ್ಲ ಆದರೆ ದೂರಿನಲ್ಲಿ ಅದು ಯಾವ ಕಾಯ್ದೆ ಯಡಿ ಬರುತ್ತದೆ ಎಂದು ನಮೂದು ಮಾಡಿರುತ್ತೇನೆ .

**11**. ಮಾಸ್ತಿಕಟ್ಟಾದಿಂದ ಇರಾನ್ ಮೂಲೆ ಎಷ್ಟು ದೂರ ವಾಗುತ್ತದೆ ಎಂದರೆ 5 ಕಿ ಮೀ . ಇರಾನ್ ಮೂಲೆ ಯಿಂದ ಅಂಕೋಲಾ 16 ಕಿ ಮೀ ಎಂದರೆ ಸರಿ . ಸ್ದ್ರಿ ಅಂಕೋಲಾ ತಾಲೂಕು 16 ಕಿ ಮೀ ದೂರಇರುವುದರಿಂದ ನ್ಯಾಯಾಲಯಕ್ಕೆ ಬಂದು ಶೋಧನಾ ವಾರಂಟ ಪಡೆದುಕೊಂಡು ಹೋಗಲು ತೊಂದರೆ ಇತ್ತಾ ಎಂದರೆ ಇಲ್ಲ . ಇರಾನ್ ಮೂಲೆ ಯಲ್ಲಿ ಗೌಡರ ಮನೆ ಜಾಸ್ತಿ ಇರುತ್ತದೆ ಎಂದರೆ ಸರಿ . ಹಾಲಕ್ಕಿ ಗೌಡರ ಮನೆ ಇರಾನ ಮೂಲೆಯಲ್ಲಿ ಒಂದಕ್ಕೊಂದು ತಾಗಿ ಕೊಂಡು ಇರುತ್ತದೆ . ಕೆಲವೊಂದು ಕಡೆ ತಾಗಿ ಕೊಂಡು ಇರುತ್ತದೆ ಕೆಲವೊಂದು ಕಡೆ ಪ್ರತ್ಯೆಕವಾಗಿ ಮನೆ ಇರುತ್ತದೆ . 2 ನೇ ಅರೋಪಿಯ ಮನೆ ಬಳಿ ಗಂಗಾಧರ , ಮೋಹನ , ಬೀರು ರವರ ಮನೆ ಇರುತ್ತದೆ ಎಂದರೆ ಸರಿ . ಸ್ದ್ರಿ ಆರೋಪಿತರ ಮನೆಯಲ್ಲಿ ಅಕ್ಕ ಪಕ್ಕದ ಮನೆಗಳು ಇದ್ದು ಮತ್ತು ಸಾರ್ವಜನಿಕ ರಸ್ತೆ ಇರುತ್ತದೆ ಎಂದರೆ ಒಂದು ಮಣ್ಣಿನ ರಸ್ತೆ ಇರುತ್ತದೆ ಹಾಗೂ ಸಾರ್ವಜನಿಕ ಓಡಾಟ ಕಡಿಮೆ ಆಗಿರುತ್ತದೆ . ಸ್ದ್ರಿ 1 ನೇ ಅರೋಪಿಯ ಮನೆ ಬಳಿ ಇರುವ ಖಾಸಗಿ ವ್ಯಕ್ತಿಗಳನ್ನು ಕರೆಸಿ ವಿಚಾರಣೆ ಮಾಡುವ ಪ್ರಯತ್ನ ಮಾಡಿರುತ್ತೀರಾ ಎಂದರೆ ಅವರೆಲ್ಲ 1 ನೆ ಅರೋಾಪಿಯ ಸಂಬಂಧಿಕರು ಆಗಿರುವುದರಿಂದ ಅವರನ್ನು ಕರೆಸಿ ವಿಚಾರಣೆ ಮಾಡಿಲ್ಲ . ಅವರೆಲ್ಲಾ 1 ನೆ ಅರೋಪಿಯ ಸಂಬಂಧಿಕರು ಹೌದೊ ಅಲ್ಲವೊ ಎಂದು ವಿಚಾರಣೆ ಮಾಡಿಲ್ಲ ಆದರೆ ಸಂಬಂಧಿಕರು ಎಂದು ಕೇಳಿ ತಿಳಿದುಕೊಂಡಿರುತ್ತೇನೆ .

**12**. ಸದ್ರಿ ಹೂತಿಟ್ಟಿದ್ದಾರೆ ಎನ್ನಲಾದ ಅವಶೇಷಗಳು ಒಟ್ಟಾರೆಯಾಗಿ 24.3 ಕೆಜಿ ತೂಕ ಇತ್ತು . ಸದ್ರಿ 24.3 ಕೆಜಿ ತೂಕದ ಅವಶೇಷಕ್ಕೆ ಎಷ್ಟು ತೂಕದ ಮಾಂಸ ಬರಬಹುದು ಎಂದರೆ ಕಷ್ಟ ಹೇಳಲು ಆಗುವುದಿಲ್ಲ . 24.3 ಕೆಜಿ ಅವಶೇಷದ ತೂಕಕ್ಕೆ 2.7 ಕೆಜಿ ತೂಕದ ಅಷ್ಟೆ ಮಾಂಸ ಬರುತ್ತದಾ ಎಂದರೆ ನನಗೆ ಹೇಳಲಾಗುವುದಿಲ್ಲ . ಈ ಪ್ರಕರಣಕ್ಕೆ ಬೇಕಾದಂತೆ ನೀವು ಈ ಪ್ರಕರಣವನ್ನು ಸೃಷ್ಟಿ ಮಾಡಿ ಕೊಂಡಿರುವುರಿಂದ 2.7 ಕೆ ಜಿ ತೂಕದ ಅಷ್ಟೆ ಮಾಂಸ ಬಂದಿರುತ್ತದೆ ಎಂದು ನೀವು ಸೃಷ್ಟಿ ಮಾಡಿ ಕೊಂಡಿರುತ್ತೀರಿ ಎಂದರೆ ಸರಿಯಲ್ಲ .

**13**. ನಿಪಿ–15 ನ್ನು ಯಾರು ನಿಮಗೆ ಕೊಟ್ಟರು ಎಂದರೆ ಅದು ಗ್ರಾಮ ನಕಾಶೆ ಯಾಗಿದ್ದು ನಮ್ಮ ಬಳಿ ಇರುತ್ತದೆ . ಗ್ರಾಮ ನಕಾಶೆಯನ್ನು ನೀಡುವುದು ಕಂದಾಯ ಇಲಾಖೆಯವರು ಅಥವಾ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ಎಂದರೆ ಅವರ ಕಡೆ ಪ್ರತ್ಯೆಕವಾಗಿ ಸರ್ವೆ ನಂಬರನ ಟಿಪ್ಪಣಿ ಇರುತ್ತದೆ ನಮ್ಮ ಕಡೆಯಲ್ಲಿ ಇಡಿ ಗ್ರಾಮದ ನಕಾಶೆ ಇರುತ್ತದೆ . ನಿಪಿ–16 ರಲ್ಲಿ ಕಾಣುವ ಸರ್ವೆ ನಂ 240 ಹಿಸ್ಸಾ 1 ನಿಪಿ–15 ರಲ್ಲಿ ಕಾಣುವುದಿಲ್ಲ ಎಂದರೆ ಸರ್ವೆ ನಂ 63 ಆಗಿ ಕಾಣುತ್ತದೆ . ಆದರೆ RTC

ಯಲ್ಲಿ ಸರ್ವೆ ನಂಬರ ಕಾಣುವುದಿಲ್ಲ ಆದರೆ ಬ್ಲಾಕ್ ನಂಬರ ಕಾಣುತ್ತದೆ . ಸರ್ವೆ ನಂಬರ 63 ರ ಪಹಣಿ ಪತ್ರಿಕೆ ಹಾಜರ ಪಡಿಸಲು ನಿಮಗೆ ತೊಂದರೆ ಇರುತ್ತದಾ ಎಂದರೆ ಸರ್ವೆ 63 ರ ಪಹಣಿ ಪತ್ರಿಕೆ ಇರುವುದಿಲ್ಲ ಆದರೆ ಸರ್ವೆ ನಂ 63 ರ ಬ್ಲಾಕ ನಂಬರ 240 ಆಗಿರುತ್ತದೆ ಹಾಗಾಗಿ ನೋಟಿಫಿಕೇಷನ 63 ರಲ್ಲಿ ಇರುತ್ತದೆ . ಸರ್ವೆ ನಂ 63 ಇದು ಬ್ಲಾಕ ನಂಬರ 240 ಹಿಸ್ಸಾ 1 ಎನ್ನುವ ಬಗ್ಗೆ ಯಾವುದಾದರೂ ದಾಖಲಾತಿ ಹಾಜರ ಪಡಿಸಿರುತ್ತೀರಾ ಎಂದರೆ RTC ಯಲ್ಲಿ 9 ನೆ ಕಾಲಂ ಸರಕಾರ ಎಂದು ನಮುದು ಆಗಿರುತ್ತದೆ . ನಿಪಿ–17 ಏನು ಎಂದರೆ ಅದು ಗೆಜೆಟ್ ನೋಟಿಫಿಕೇಷನ ಆಗಿದ್ದು ಅದು ಪಾರೆಸ್ಟ ನದ್ದು ಎಂದು ತೋರಿಸಲಾಗಿರುತ್ತದೆ . ನಿಪಿ–17 ಯಥಾ ಎಂದು ತೋರಿಸಲು ನಿಮ್ಮ ಸಹಿ ಅಥವಾ ಶೀಲು ಹಾಗೂ ಕಂದಾಯ ಇಲಾಖೆಯ ಸಹಿ ಮತ್ತು ಶೀಲು ಇರುತ್ತದಾ ಎಂದರೆ ಅದು ಒಂದು ಜೆರಾಕ್ಸ ಪ್ರತಿ ಆಗಿರುತ್ತದಾ ಎಂದರೆ ಇದು ಒಂದು ನೋಟಿಪಿಕೆಷನ ಆಗಿರುತ್ತದೆ . ಸದ್ರಿ ಅಧಿಸೂಚನೆ ತುಂಬಾ ಪುಟದ್ದು ಆಗಿರುತ್ತದೆ ಆದರೆ ಈ ಪ್ರರಣಕ್ಕೆ ಸಂಬಧಿಸಿದಂತೆ ನಿಪಿ–17 ರಂತೆ ಒಂದು ಪುಟವನ್ನು ಹಾಜರ ಪಡಿಸಿರುತ್ತೇನೆ . ಸದ್ರಿ ನಿಪಿ–17 ಮತ್ತು 16 ರಲ್ಲಿರುವ ಕ್ಷೇತ್ರದ್ದು ಹೊಂದಾಣಿಕೆ ಆಗುವುದಿಲ್ಲ ಎಂದರೆ ಅದು ನೋಟಿಪಿಕೆಷನ ಆಗಿದ್ದು 1910 ರಲ್ಲಿ ಅದರ

ನಂತರದಲ್ಲಿ ಕೆಲವೊಂದಿಷ್ಟು dis forest ಆಗಿರುತ್ತದೆ . ಆದ್ದರಿಂದ RTC ಯಲ್ಲಿ ಕಡಿಮೆ area ತೋರಿಸಲಾಗಿರುತ್ತದೆ . ನಿಪಿ–15 ರಿಂದ 17 ನ್ನು ನೀವು ಸೃಷ್ಟಿ ಮಾಡಿ ಕೊಂಡದ್ದು ಎಂದರೆ ಸರಿಯಲ್ಲ .

( ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು , ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.